

ಕುಡುಕನೊಬ್ಬ ಕಂಠಪೂರ್ತಿ ಕುಡಿದು ರಸ್ತೆ ಅಂಚಿನಲ್ಲಿ ಬಿದ್ದಿದ್ದ. ಸಜ್ಜನರೊಬ್ಬರು ಅವನ ಬಳಿ ಹೇಳಿದರು. 'ಅಲ್ಲಪ್ಪಾ, ಇಷ್ಟೊಂದು ಯಾಕೆ ಕುಡಿಯಬೇಕಿತ್ತು?'

'ಕುಡಿಯದೇ ಬೇರೆ ಮಾರ್ಗವಿರಲಿಲ್ಲ' ಎಂದು ಕುಡುಕ ತಡವರಿಸಿದ.

'ಅದೇನು ಅಂಥದ್ದು?'

'ಬಾಟ್ಲಿಯ ಮುಚ್ಚಳ ಕಳೆದು ಹೋಗಿತ್ತು. ಹೀಗಾಗಿ ವಿಧಿಯಿಲ್ಲದೆ ಇಡೀ ಬಾಟ್ಲಿಯನ್ನು  ಖಾಲಿ ಮಾಡಿದೆ' ಕುಡುಕ ಸಮಜಾಯಿಷಿ ಹೇಳಿದ.

★★★

ಒಂದು ಕ್ಲಬ್‌ನಲ್ಲಿ ಕೋಟ್ಯಧಿಪತಿಗಳು ಮಾತನಾಡುತ್ತಿದ್ದರು.

ಆತ: ಹೇಳಿ ಇವತ್ತು ಹೇಗೆ ಕಳೀತು?'

ಈತ: 'ಚೆನ್ನಾಗಿಯೇ ಕಳೀತು. ಆದರೆ ಎರಡು ಗಂಟೆಗಳ ಸಮಯವನ್ನು ಬ್ಯಾಂಕ್‌ನವರು ಹಾಳು ಮಾಡಿಬಿಟ್ಟರು. ಒಂದು ಸಾಲದ ಅರ್ಜಿ ತುಂಬಿಸುವುದಕ್ಕಾಗಿ ಅವರು ಅನೇಕ ಪ್ರಶ್ನೆಗಳನ್ನು ಕೇಳಿದರು.

ಆತ: ಆದರೆ, ನಿನಗ್ಯಾಕೆ ಬ್ಯಾಂಕ್ ಸಾಲ?

ಈತ: ನನಗಲ್ಲ! ಬ್ಯಾಂಕ್‌ಗೆ ಸಾಲ ಬೇಕಿತ್ತು!

★★★

ಯಾಕೆ ತುಂಬಾ ಯೋಚ್ನೆ ಮಾಡ್ತಿದ್ದೀಯಾ?

ಇವತ್ತು ಆಫೀಸಿಗೆ ಬರುವಾಗ ಅವಸರದಲ್ಲಿ ಪರ್ಸನ್ನು ಮನೇಲಿ ಮರ್ತು ಬಂದೆ

ನನ್ನ ನೌಕರ ತುಂಬಾ ಪ್ರಾಮಾಣಿಕ ಅಂತ ನೀನು ಹೇಳ್ತಿರ್ತೀಯ?

ಇದೇ ಪ್ರಾಬ್ಲಮ್, ನೌಕರನಿಗೆ ಪರ್ಸ್ ಸಿಕ್ಕರೆ ಅದನ್ನು ಅವನು ನನ್ನ ವೈಫ್‌ಗೆ ಕೊಟ್ಟು ಬಿಡ್ತಾನೆ!

(ಸಂಗ್ರಹ) ಡಿ.ಎನ್.ಶ್ರೀನಾಥ್

ಗುಂಡ: ಡಾಕ್ಟ್ರೇ ಇದೇನಿದು? ಸ್ಮಶಾನದ ಪಕ್ಕದಲ್ಲೇ ಏಕೆ ಕ್ಲಿನಿಕ್ ತೆಗೆದಿದ್ದೀರಾ?

ವೈದ್ಯ: ನನ್ನ ಕರ್ಮ ಕಣಪ್ಪಾ! ಸ್ಮಶಾನದ ಪಕ್ಕದಲ್ಲಿ ನಾನು ಕ್ಲಿನಿಕ್ ತೆಗೀಲಿಲ್ಲ. ನಾನು ಕ್ಲಿನಿಕ್ ಆರಂಭಿಸಿದ ಮೇಲೆ ಕ್ಲಿನಿಕ್ ಪಕ್ಕವೇ ಸ್ಮಶಾನ ಮಾಡಿದ್ದಾರೆ!

(ಸಂಗ್ರಹ)



